


ಮಕ್ಕಳು ಇಂಜಿನಿಯರಿಂಗ್ ಓದಿ ಮುಗಿಸಿದ್ದೇ ಎಂಎನ್‌ಸಿಗಳಲ್ಲಿ, ಬಿಪಿಓಗಳಲ್ಲಿ ಕೆಲಸ ಗಿಟ್ಟಿಸಿಕೊಂಡು, ಮೂವತ್ತು ವರ್ಷಗಳ ನಂತರ ಮುಟ್ಟಿರುವ ತಮ್ಮ ಸಂಬಳದ ಮೂರು ಪಟ್ಟು ಮೊತ್ತವನ್ನು ಮೊದಲ ತಿಂಗಳೇ ಪಡೆದು, ಆರು ತಿಂಗಳಲ್ಲೇ ಪ್ರಾಜೆಕ್ಟ್ ಅಂತ ವಿದೇಶಗಳಿಗೆ ಹೋಗಿ ಬಂದು ಕಂಪನಿಯನ್ನೆ ಬದಲಿಸುವ ಪ್ರಸ್ತಾಪ ಮಾಡುತ್ತಿದ್ದಾಗ ವಿಸ್ಮಿತರಾಗುತ್ತಿದ್ದರು. ಆದರೆ ತಮ್ಮ ಮುದ್ದಿನ ಮಗ ಇಂಜಿನಿಯರಿಂಗ್ ಮೊದಲ ದರ್ಜೆಯಲ್ಲಿ ಪಾಸಾದರೂ ಕ್ಯಾಂಪಸ್ ಸೆಲೆಕ್ಟ್ ಆಗದೇ ಮನೆಯಲ್ಲೇ ಉಳಿದು, ಕನ್ನಡ ಮೇಜರ್ ಬಿ.ಎ. ಓದಿದವರಂತೆ ಕಥೆ ಕಾದಂಬರಿ ಹಿಡಿದು ಕೂರತೊಡಗಿದ್ದಾಗ ಕೊತಕೊತನೇ ಕುದ್ದಿದ್ದರು. ಅವರಿಗೆ ಮಗ ಕೆಲಸಕ್ಕೆ